# ತೆರೆಯ ಹಿಂದೆ– ಮುಂದೆ ಮೇಷ್ಟ್ರು ಆಗುವುದೇ ಮೆಚ್ಚುಗೆ



ಹನಿಯೂರು ಚಂದ್ರೇಗೌಡ ಕನ್ನಡ ಕಲರ್ಸ್‌ನ 'ಗೀತಾ'ದಲ್ಲಿ ಪ್ರೊಫೆಸರ್

◆ **ಬಹುಮುಖ ಕಾರ್ಯಗಳ ನಿರ್ವಹಣೆಗೆ ಸಮಯ ಹೇಗೆ ಹೊಂದಿಸುತ್ತೀರಿ?**

ಎಲ್ಲಿ ನಮಗೆ ಅಭಿರುಚಿ ಇರುತ್ತದೆಯೋ ಅಲ್ಲಿ ಹೊಂದಾಣಿಕೆ ಸಹಜವಾಗಿ ಬರುತ್ತದೆ. ಹಿರಿಯರು ಓದಿನ ಬಗ್ಗೆ ಒಂದು ಮಾತು ಹೇಳುತ್ತಾರೆ. 'ಪುಸ್ತಕ ಓದುವಾಗ ವಿರಾಮ ಬೇಕು ಅನ್ನಿಸಿದರೆ, ಬೇರೆ ಪುಸ್ತಕ ಹಿಡಿ. ಅದೇ ವಿರಾಮ'. ನಾವು ಮಾಡುವ ಬೇರೆ ಬೇರೆ ಕೆಲಸಗಳು ನಮ್ಮಲ್ಲಿ ಏಕತಾನತೆ ಇಲ್ಲದಂತೆ ಮಾಡುತ್ತವೆ. ಕೆಲಸ ಪರಿಣಾಮಕಾರಿಯಾಗಿ ನಿರ್ವಹಿಸಲು ಅದು ಸಹಾಯ ಮಾಡುತ್ತದೆ. ವೃತ್ತಿಯಿಂದ ಅಧ್ಯಾಪಕ, ಹವ್ಯಾಸದಿಂದ ಜನಪದ ಸಂಶೋಧನೆ, ತಿರುಗಾಟ ಮಾಡುತ್ತೇನೆ. ಒಂದಿಷ್ಟು ದಿನ ಪತ್ರಕರ್ತ–ರೇಡಿಯೊ ಜಾಕಿ ಕೂಡ ಆಗಿದ್ದೆ.

◆ **ನಿಮ್ಮ ಸಿನಿಮಾ ಎಲ್ಲಿಗೆ ಬಂತು?**

ಈಗ ಸಿನಿಮಾ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳು ಆಗ್ತಾ ಇವೆ. ಮೊದಲಿನಂತೆ ಸಾಹಿತ್ಯ–ರಂಗಭೂಮಿ ಪ್ರಿಯರು ಮಾತ್ರ ಆ ಮಾಧ್ಯಮದಲ್ಲಿ ಇಲ್ಲ. ಎಂಜಿನಿಯರಿಂಗ್‌ನಂತಹ ತಾಂತ್ರಿಕ ಪದವೀಧರರೂ ತೊಡಗಿಸಿಕೊಳ್ಳುತ್ತಿದ್ದಾರೆ. ಹೊಸ ಆಲೋಚನೆಯ ಯುವಕರು ಚಿತ್ರಕಥೆ, ನಿರ್ಮಾಣ, ನಿರ್ದೇಶನ ಮಾಡುತ್ತಿದ್ದಾರೆ. ಅವರು ಕಿರುತೆರೆ–ಹಿರಿತೆರೆ ಎರಡರಲ್ಲೂ ದೊಡ್ಡ ಪ್ರಮಾಣದಲ್ಲಿ ತೊಡಗಿದ್ದಾರೆ. ಅದು ತಾಂತ್ರಿಕ ಶ್ರೀಮಂತಿಕೆ ಹೆಚ್ಚಿಸಿದೆ. ನಮ್ಮ ಮುಂದೆ 'ಬಹುರೂಪಿ' ಚಿತ್ರಕಥೆ ಇದೆ. ಸಿದ್ದಗಂಗಯ್ಯ ಕಂಬಾಳ್ ಅವರ ಜೊತೆ ಸಿನಿಮಾ ಮಾಡುತ್ತಿದ್ದೇವೆ. ಆರಂಭದಲ್ಲಿ ಈ ಕ್ಷೇತ್ರದಲ್ಲಿ ನನಗೆ ಒಲವು ಇರಲಿಲ್ಲ. ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಲು ಶುರು ಮಾಡಿದ ನಂತರ ಇದೂ ಪ್ರಬಲ ಮಾಧ್ಯಮ ಎಂದು ಗೊತ್ತಾಯಿತು. ಸಿನಿಮಾ ನಿರ್ಮಾಣದ ಜೊತೆ ನಿರ್ದೇಶನವನ್ನೂ ಮಾಡುವ ಕನಸಿದೆ.

◆ **ಅಭಿನಯದ ನಂಟು ಬೆಸೆದುಕೊಂಡಿದ್ದು ಹೇಗೆ?**

ಅಧ್ಯಾಪಕನಾದ ನನಗೆ ಬಣ್ಣದ ಲೋಕದಲ್ಲಿ ಪ್ರವೇಶ ಮಾಡುವ ಯೋಚನೆ ಇರಲಿಲ್ಲ. ಅದಕ್ಕಾಗಿ ಯಾವುದೇ ರಂಗ ತಾಲೀಮು ಮಾಡಿಲ್ಲ. ಆಕಸ್ಮಿಕವಾಗಿ ಒಮ್ಮೆ ಕಿರುತೆರೆಗೆ ಪ್ರವೇಶ ಮಾಡಿದೆ. ಅದಕ್ಕೆ ಕಾರಣವಾಗಿದ್ದು ನನ್ನ ವಿದ್ಯಾರ್ಥಿ. ನನ್ನ ವಿದ್ಯಾರ್ಥಿಯೊಬ್ಬ ಫೋಟೊಗ್ರಫಿ ಮಾಡುತ್ತಿದ್ದ. ಆತನೇ ಸೀರಿಯಲ್ ಒಂದರಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿಯೂ ಕೆಲಸವನ್ನು ಮಾಡುತ್ತಿದ್ದ. ಕ್ಲಾಸ್‌ನಲ್ಲಿ ನಾನು ಪಾಠ ಮಾಡುವುದನ್ನು ಗಮನಿಸಿದ್ದ ಆತ ಒಮ್ಮೆ ನನಗೆ ''ಸರ್ 'ಮಾಂಗಲ್ಯ' ಧಾರಾವಾಹಿಯಲ್ಲಿ ನಾಯಕನ ಗೆಳೆಯನ ಪಾತ್ರ ಇದೆ ಬರ್ತೀರಾ?'' ಎಂದು ಆಹ್ವಾನ ನೀಡಿದ. ಅವನ ಆಮಂತ್ರಣದ ಮೇರೆಗೆ ಅತಿಥಿಯಂತೆ ಅದರಲ್ಲಿ ಬಣ್ಣ ಹಚ್ಚಿದೆ. ಆ ದೃಶ್ಯ ಹೇಗಿತ್ತೆಂದರೆ ನಾಯಕನಿಗೆ ದಾಂಪತ್ಯದಲ್ಲಿ ವಿರಸ ಹುಟ್ಟಿರುತ್ತದೆ. ಪತ್ನಿಯಿಂದ ಬಿಡುಗಡೆ ಬಯಸುತ್ತಾನೆ. ಅವನಿಗೆ ಕೋರ್ಟ್ ಬಿಡುಗಡೆಯ ತೀರ್ಪು ನೀಡಿದ ಖುಷಿಗೆ ಅವನು ಪಾರ್ಟಿ ಕೊಡುತ್ತಾನೆ. ನಾನೂ ಅದರಲ್ಲಿ ಭಾಗಿಯಾಗಿ ಅಮಲಿನಲ್ಲಿ ಸಂತೋಷವನ್ನು ಪ್ರಕಟಿಸುವುದಾಗಿತ್ತು. ಅದಾದ ಮೇಲೆ ಬೇರೆ ಬೇರೆ ಧಾರಾವಾಹಿಗಳಲ್ಲಿ ಅವಕಾಶ ಸಿಕ್ಕವು. ಇದುವರೆಗೆ 42 ಧಾರಾವಾಹಿಗಳಲ್ಲಿ ಅಭಿನಯಿಸಿದ್ದೇನೆ.

◆ **ನಿಮಗೆ ಖುಷಿ ಕೊಟ್ಟ ಕ್ಷೇತ್ರ ಮತ್ತು ಪಾತ್ರ ಯಾವುದು?**

ಹತ್ತಾರು ಭಿನ್ನ ಭಿನ್ನ ಪಾತ್ರಗಳಿಗೆ ಜೀವ ತುಂಬಿದ್ದೇನೆ. ಡಾಕ್ಟರ್, ಲಾಯರ್, ಅಧ್ಯಾಪಕ ಸೇರಿದಂತೆ ಹಲವಾರು ವೃತ್ತಿಪರ ಪಾತ್ರಗಳನ್ನೂ ನಿರ್ವಹಿಸಿದ್ದೇನೆ. ಉದಯದಲ್ಲಿ 'ಬದುಕು' ಸೀರಿಯಲ್ ಆರು ವರ್ಷ ಬಂತು. ಅದರಲ್ಲಿ ವಕೀಲನ ಪಾತ್ರ ಮಾಡಿದೆ. ನಾಯಕಿಯ ನೋವಿಗೆ ನ್ಯಾಯವನ್ನು ಒದಗಿಸಲು ಶ್ರಮಿಸುವ ಪಾತ್ರ ಅದಾಗಿತ್ತು. ಅದು ನನಗೆ ವೈಯಕ್ತಿಕವಾಗಿ ಕಿರುತೆರೆಯಲ್ಲಿ ಬೇರೂರಲು ನೆರವಾಯಿತು. ಅದೇ ನನಗೂ ಅಭಿನಯದ ಬಗ್ಗೆ ಭರವಸೆ ತುಂಬಿ ಈ ಕ್ಷೇತ್ರದಲ್ಲಿ ಮುಂದುವರಿಯಲು ಆತ್ಮವಿಶ್ವಾಸವನ್ನು ಕೊಟ್ಟಿತು. ಹತ್ತಾರು ವರ್ಷಗಳ ಈ ಅವಧಿಯಲ್ಲಿ ಎಷ್ಟೆಲ್ಲ ಪಾತ್ರ ಮಾಡಿದ್ದರೂ ಇತ್ತೀಚೆಗೆ ವೈದ್ಯ, ಪ್ರೊಫೆಸರ್ ಪಾತ್ರಗಳು ಹೆಚ್ಚು ಸಿಗ್ತಾ ಇವೆ. ವೃತ್ತಿಯಿಂದ ನಾನು ಅಧ್ಯಾಪಕ. ತೆರೆಯ ಮೇಲೂ ಅದೇ ಪಾತ್ರವಾದಾಗ ನಟನೆ ಮಾಡಿದ ಹಾಗೆ ಅನ್ನಿಸದಷ್ಟು ಸಹಜವಾಗಿ ಭಾವ ಪ್ರಕಟವಾಗುತ್ತದೆ. ಬಾಲ್ಯದಲ್ಲಿ ಮಿಲಿಟರಿ ಸೇರುವ ಆಸೆ ಇತ್ತು. ನನಗೆ ಅವಕಾಶವೂ ಸಿಕ್ಕಿತು. ಹೋಗಲಿಲ್ಲ. ನಂತರ ಏನೇನೋ ಆಗುವ ಆಸೆಗಳು ಬಂದು ಹೋದವು. ನಮ್ಮ ತಾಯಿಯ ಬಯಕೆಯಂತೆ ಮೇಷ್ಟ್ರು ಆಗಿದ್ದೇನೆ. ಪಾತ್ರದಲ್ಲಿಯೂ ಅದೇ ಆದಾಗ, ಕಥೆಯಲ್ಲಿ ಸಮಾಜ ಪರಿವರ್ತನೆಯ ಹೂರಣ ಇದ್ದರೆ ಒಂದಿಷ್ಟು ಖುಷಿ ಸಿಗುತ್ತದೆ.

◆ **'ಗೀತಾ' ಪಾತ್ರವನ್ನು ಪರಿಚಯಿಸುವುದಾದರೆ...**

ಕಥೆಯೇ ನಾಯಕನ ರೀತಿಯಲ್ಲಿ 'ಗೀತಾ'ದಲ್ಲಿ ನಿರೂಪಣೆ ಆಗಿದೆ. ಇದರಲ್ಲಿ ನಾಯಕಿ ಗೀತಾ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಾಳೆ. ಆಕೆ ತೊಂದರೆ ಕೊಟ್ಟ ಶ್ರೀಮಂತನ ಮಗನನ್ನೇ ಮದುವೆ ಆಗುತ್ತಾಳೆ. ಅವನ ಕೆಟ್ಟ ಗುಣಗಳ ವಿರುದ್ಧ ಆಕೆಯ ಸಂಘರ್ಷ ಇದ್ದೇ ಇರುತ್ತದೆ. ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕನಾದ ನಾನು ಸಹಾಯ ಮಾಡುತ್ತೇನೆ. ಅವಳಿಗೆ ನಾನು ಮೆಚ್ಚಿನ ಅಧ್ಯಾಪಕ. ಕಥೆ ಸಮಕಾಲೀನ ಶೈಕ್ಷಣಿಕ ವ್ಯವಸ್ಥೆಯ ದೋಷವನ್ನೂ ಸೂಕ್ಷ್ಮವಾಗಿ ನಿರೂಪಿಸುತ್ತದೆ.

■ **ರಾಘವೇಂದ್ರ ಕೆ.**